LIBRARY
BMS COLLEGE OF
Bull Temple Road, Basavan...
Bengaluru - 560 019

2068 (3 Year)

# V Semester 3 Year LL.B. Examination, March/April 2024 (Odd Sem.)
## (2016 Batch Students)
## CONSTITUTIONAL LAW – II

Duration : 3 Hours                                                                 Max. Marks : 100

**Instructions : 1. Answer Question No. 9 and any five of the remaining questions.**
**2. Q. No. 9 carries 20 marks and the remaining questions carry 16 marks each.**
**3. Answers should be written either in English or in Kannada completely.**

Q. No. 1. Explain the constitution, powers and responsibilities of Panchayaths and Municipalities in India. Marks : 16

ಭಾರತದಲ್ಲಿ ಪಂಚಾಯತಿಗಳು ಹಾಗೂ ಪೌರ ಸಂಸ್ಥೆಗಳ ರಚನೆ, ಅಧಿಕಾರಗಳು ಮತ್ತು ಜವಾಬ್ದಾರಿಗಳನ್ನು ವಿವರಿಸಿ.

Q. No. 2. When is the contract entered by the Government binding on it ? Explain. Marks : 16

ಸರ್ಕಾರ ಮಾಡಿಕೊಂಡ ಕರಾರು ಯಾವಾಗ ಬಂಧನಕಾರಿಯಾಗುತ್ತದೆ ? ವಿವರಿಸಿ.

Q. No. 3. Discuss the powers and functions of Election Commission. Explain the fundamental principles of election. Marks : 16

ಚುನಾವಣಾ ಆಯೋಗದ ಅಧಿಕಾರ ಮತ್ತು ಪ್ರಕಾರ್ಯಗಳನ್ನು ಚರ್ಚಿಸಿರಿ. ಚುನಾವಣೆಯ ಮೂಲಭೂತ ತತ್ವಗಳನ್ನು ವಿವರಿಸಿ.

Q. No. 4. Discuss the liability of the state for tortious acts of its servants. Marks : 16

ತನ್ನ ನೌಕರರ ಅಪಕೃತ್ಯಕ್ಕೆ ರಾಜ್ಯದ ಬಾಧ್ಯತೆಯನ್ನು ಚರ್ಚಿಸಿರಿ.

Q. No. 5. What are the special provisions provided in Indian Constitution regarding Union Territories, Scheduled and Tribal areas. Marks : 16

ಕೇಂದ್ರಾಡಳಿತ ಪ್ರದೇಶಗಳು, ಅನುಸೂಚಿತ ಮತ್ತು ಬುಡಕಟ್ಟು ಪ್ರದೇಶಗಳ ಬಗ್ಗೆ ಭಾರತ ಸಂವಿಧಾನದಲ್ಲಿ ಉಲ್ಲೇಖಿತವಾಗಿರುವ ವಿಶೇಷ ನಿಬಂಧನೆಗಳು ಯಾವುವು ?

Q. No. 6. Explain in detail the principles of Constitutional Interpretation. Marks : 16

ಸಾಂವಿಧಾನಿಕ ವ್ಯಾಖ್ಯಾನದ ತತ್ವಗಳನ್ನು ವಿಸ್ತೃತವಾಗಿ ವಿವರಿಸಿ.

Q. No. 7. Briefly explain the nature and scope of Judicial Review as per the provisions of the Constitution of India. Marks : 16

ಭಾರತ ಸಂವಿಧಾನದ ನಿಯಮಗಳ ಅನುಸಾರ ನ್ಯಾಯಿಕ ಪುನರ್‌ವಿಮರ್ಶೆಯ ಸ್ವರೂಪ ಮತ್ತು ವ್ಯಾಪ್ತಿಯನ್ನು ಸಂಕ್ಷಿಪ್ತವಾಗಿ ವಿವರಿಸಿರಿ.

Q. No. 8. Write short note on **any two** of the following : Marks : 8×2=16

ಕೆಳಗಿನ ಯಾವುದಾದರೂ **ಎರಡಕ್ಕೆ** ಕಿರು ಟಿಪ್ಪಣಿ ಬರೆಯಿರಿ :

(a) Importance of Constituent Assembly Debates.

ಸಂವಿಧಾನ ರಚನಾ ಸಭೆಯ ಚರ್ಚೆ ನಡಾವಳಿಗಳ ಪ್ರಾಮುಖ್ಯತೆ.

(b) National Commission for Women.

ರಾಷ್ಟ್ರೀಯ ಮಹಿಳಾ ಆಯೋಗ.

(c) Constitutional provisions relating to official language in India.

ಭಾರತದಲ್ಲಿ ಅಧಿಕೃತ ಭಾಷೆಗೆ ಸಂಬಂಧಿಸಿದ ಸಂವಿಧಾನದ ನಿಬಂಧನೆಗಳು.

Q. No. 9. Solve **any two** of the following problems : Marks : 2×10=20

ಕೆಳಗಿನವುಗಳಲ್ಲಿ ಯಾವುದೇ **ಎರಡಕ್ಕೆ** ಕಾರಣ ಸಹಿತ ಉತ್ತರಿಸಿ :

(a) A truck belonging to the Public Works Department met with an accident while carrying out famine relief work due to negligence of its driver and resulted in the death of a person. Is state liable for it ? Decide.

ಲೋಕೋಪಯೋಗಿ ಇಲಾಖೆಗೆ ಸೇರಿದ ಲಾರಿಯು ಬರಗಾಲ ಪರಿಹಾರ ಕಾರ್ಯನಿರ್ವಹಿಸುತ್ತಿರುವಾಗ ಅದರ ಚಾಲಕನ ನಿರ್ಲಕ್ಷ್ಯದಿಂದ ಅಪಘಾತಕ್ಕೆ ಒಳಗಾಯಿತು ಮತ್ತು ಅದು ಒಬ್ಬ ವ್ಯಕ್ತಿಯ ಸಾವಿಗೆ ಕಾರಣವಾಯಿತು. ಅದಕ್ಕೆ ಸರಕಾರವು ಹೊಣೆಗಾರ ಆಗುವುದೇ ? ನಿರ್ಣಯಿಸಿ.

(b) The Jewellery of a citizen of India seized by the police authorities of a state, on suspicion of being stolen Jewellery, is lost while in police custody. The owner claims damages from the state for the loss of his Jewellery and is rejected. What remedies are available to the owner against the state ?

ಭಾರತದ ನಾಗರಿಕನೊಬ್ಬನ ಒಡವೆಯನ್ನು ಪೊಲೀಸ್ ಸಿಬ್ಬಂದಿಯವರು ಅಪಹರಿಸಿದ ಒಡವೆಯೆಂದು ಸಂಶಯಾಸ್ಪದ ಕಾರಣದ ಮೇಲೆ ವಶಪಡಿಸಿಕೊಂಡಾಗ, ಆ ಒಡವೆಯು ಪೊಲೀಸರ ಅಧೀನದಲ್ಲಿದ್ದಾಗ ಕಳೆದು ಹೋಯಿತು. ಒಡವೆಯ ಮಾಲೀಕನು ಸರಕಾರದ ವಿರುದ್ಧ ನಷ್ಟ ಪರಿಹಾರಕ್ಕೆ ಸಲ್ಲಿಸಿದ ಮನವಿಯು ತಿರಸ್ಕರಿಸಲ್ಪಟ್ಟಿತು. ಈ ಬಗ್ಗೆ ಸರಕಾರದ ವಿರುದ್ಧ ಇರಬಹುದಾದ ಪರಿಹಾರ ಮಾರ್ಗಗಳು ಯಾವುವು ?

(c) A candidate for an assembly constituency intends to challenge the order of Election Commission mandating ballot paper use instead of Electronic Voting Machine in his constituency. Can he do so ?

ವಿಧಾನ ಸಭಾ ಕ್ಷೇತ್ರವೊಂದರ ಅಭ್ಯರ್ಥಿಯು ಚುನಾವಣಾ ಆಯೋಗವು ಆತನ ಕ್ಷೇತ್ರದಲ್ಲಿ ವಿದ್ಯುನ್ಮಾನ ಯಂತ್ರಗಳ ಬದಲಾಗಿ ಮತ ಪತ್ರವನ್ನು ಬಳಸಲು ಆದೇಶಿಸಿ ಹೊರಡಿಸಿರುವ ಆದೇಶವನ್ನು ಪ್ರಶ್ನಿಸಲು ಬಯಸಿದ್ದಾನೆ. ಅವನು ಹಾಗೆ ಮಾಡಬಹುದೇ ?